# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1058
2. ಸದಸ್ಯರ ಹೆಸರು : ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ಸಚಿವರು : ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು.
4. ಉತ್ತರಿಸುವ ದಿನಾಂಕ : 14.12.2023.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಕಾನೂನು ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರಕಾರದಿಂದ ಸ್ಥಾಪಿಸಲ್ಪಟ್ಟ ವಿಶ್ವವಿದ್ಯಾಲಯ ಹಾಗೂ ಕಾನೂನು ಕಾಲೇಜುಗಳೆಷ್ಟು;(ವಿವರ ನೀಡುವುದು)</td><td>ರಾಜ್ಯದಲ್ಲಿ ಕಾನೂನು ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿಶ್ವವಿದ್ಯಾಲಯದ ಸಂಖ್ಯೆ: 01 (ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ)<br><br>ಸರ್ಕಾರಿ ಕಾನೂನು ಕಾಲೇಜುಗಳ ಸಂಖ್ಯೆ: 07<br><br>
<table>
<tr><th>ಕ್ರ. ಸಂ ಖ್ಯೆ</th><th>ಕಾಲೇಜುಗಳ ಹೆಸರು</th></tr>
<tr><td>1</td><td>ಸರ್ಕಾರಿ ಕಾನೂನು ಕಾಲೇಜು, ರಾಮನಗರ.</td></tr>
<tr><td>2</td><td>ಸರ್ಕಾರಿ ಕಾನೂನು ಕಾಲೇಜು, ಕೋಲಾರ.</td></tr>
<tr><td>3</td><td>ಸರ್ಕಾರಿ ಕಾನೂನು ಕಾಲೇಜು, ಹಾಸನ.</td></tr>
<tr><td>4</td><td>ಸರ್ಕಾರಿ ಕಾನೂನು ಕಾಲೇಜು, ಹೊಳೆನರಸೀಪುರ.</td></tr>
<tr><td>5</td><td>ವಿಜ್ಞಾನೇಶ್ವರ ಸರ್ಕಾರಿ ಕಾನೂನು ಕಾಲೇಜು, ಕಲಬುರಗಿ</td></tr>
<tr><td>6</td><td>ಸರ್ಕಾರಿ ಕಾನೂನು ಕಾಲೇಜು, ಚಾಮರಾಜನಗರ</td></tr>
<tr><td>7</td><td>ಸರ್ಕಾರಿ ಕಾನೂನು ಕಾಲೇಜು, ಹಾವೇರಿ</td></tr>
</table>
</td></tr>
<tr><td>ಆ)</td><td>ಸದರಿ ವಿಶ್ವವಿದ್ಯಾಲಯ ಹಾಗೂ ಕಾನೂನು ಕಾಲೇಜುಗಳಲ್ಲಿ 371ಜೆ ಅಡಿಯಲ್ಲಿ ಮೀಸಲಾದ ಬೋಧಕ ಹಾಗೂ ಬೋಧಕೇತರ ಹುದ್ದೆಗಳೆಷ್ಟು; ವಿಶ್ವವಿದ್ಯಾಲಯ ಹಾಗೂ ಕಾನೂನು ಕಾಲೇಜುವಾರು ವಿವರ ನೀಡುವುದು.</td><td>1. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಈ ವಿಶ್ವವಿದ್ಯಾಲಯದಲ್ಲಿ 371ಜೆ ಅಡಿಯಲ್ಲಿ ಮೀಸಲಾದ ಬೋಧಕ ಹುದ್ದೆಗಳ ಸಂಖ್ಯೆ: 07, ಬೋಧಕೇತರ ಹುದ್ದೆಗಳ ಸಂಖ್ಯೆ: 02.<br>2. ಸರ್ಕಾರಿ ಕಾನೂನು ಕಾಲೇಜುಗಳ ಪೈಕಿ ಕಲ್ಯಾಣ-ಕರ್ನಾಟಕ ವ್ಯಾಪ್ತಿಯಲ್ಲಿ ಕಲಬುರಗಿಯ ವಿಜ್ಞಾನೇಶ್ವರ ಸರ್ಕಾರಿ ಕಾನೂನು ಕಾಲೇಜು</td></tr>
</table>

| | | |
|---|---|---|
| | | ಮಾತ್ರ ಒಳಪಡಲಿದ್ದು, ಸದರಿ ಕಾಲೇಜಿಗೆ ಸಂಬಂಧಿಸಿದಂತೆ, ಪ್ರತ್ಯೇಕವಾಗಿ 371ಜೆ ಅಡಿಯಲ್ಲಿ ಹುದ್ದೆಗಳನ್ನು ಮೀಸಲಿರಿಸಲಾಗಿರುವುದಿಲ್ಲ. ಬದಲಾಗಿ ಕಲ್ಯಾಣ-ಕರ್ನಾಟಕ ವ್ಯಾಪ್ತಿಯಲ್ಲಿ ಇಲಾಖಾ ವ್ಯಾಪ್ತಿಯ ಕಛೇರಿ / ಕಾಲೇಜುಗಳಲ್ಲಿ ವೃಂದವಾರು ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ಮೀಸಲಿರಿಸಲಾಗಿರುತ್ತದೆ. |
| **ಇ)** | ಈ ವಿಶ್ವವಿದ್ಯಾಲಯ ಹಾಗೂ ಕಾನೂನು ಕಾಲೇಜುಗಳಲ್ಲಿ 371ಜೆ ಅಡಿಯಲ್ಲಿ ಲಭ್ಯವಿರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದರಿಂದ ಆ ಭಾಗದ ಸಂವಿಧಾನ ಬದ್ಧ ಹಕ್ಕನ್ನು ಕಸಿದುಕೊಂಡಂತಾಗುವುದಿಲ್ಲವೇ; ಈ ರೀತಿಯ ವಿಳಂಭಕ್ಕೆ ಕಾರಣವೇನು; | ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ ಹಾಗೂ ಸರ್ಕಾರಿ ಕಾನೂನು ಕಾಲೇಜುಗಳಲ್ಲಿ ಸದರಿ ಹುದ್ದೆಗಳನ್ನು ಭರ್ತಿ ಮಾಡುವ ಕಾರ್ಯ ಪ್ರಕ್ರಿಯೆಯಲ್ಲಿದೆ. |
| **ಈ)** | ಸದರಿ ವಿಶ್ವವಿದ್ಯಾಲಯ ಹಾಗೂ ಕಾನೂನು ಕಾಲೇಜುಗಳಲ್ಲಿ 371ಜೆ ಅಡಿಯಲ್ಲಿ ಲಭ್ಯವಿರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು; (ವಿವರ ನೀಡುವುದು)? | |

ಸಂಖ್ಯೆ: ಲಾ-ಹೆಚ್ಆರ್ಎಮ್/197/2023

**(ಎಚ್.ಕೆ. ಪಾಟೀಲ)**
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು, ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು